ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ

ಸಿ.ಸಿ.ನಂ.9138-2021

ಹೆಸರು : ನಾಗರಾಜ್
ತಂದೆ ಹೆಸರು : ಧರ್ಮ ನಾಯಕ
ವಯಸ್ಸು : 54
ಉದ್ಯೋಗ : ಟೆಂಪೋ ಚಾಲಕ
ವಾಸ : ಕೊಡಿಗೆಹಳ್ಳಿ

ಸಿಡಬ್ಲೂ-1, ಪಿಡಬ್ಲೂ-1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 09-06-2026

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

ಚಾಸಾ 2 ಪರಿಚಯ ಇದ್ದಾರೆ. ಚಾಸಾ 3 ನನ್ನ ಮಗ. . ಆರೋಪಿತಗಳ ಪರಿಚಯ ಇದೆ. ಆರೋಪಿ ನನ್ನ ಮಗನ ಸ್ನೇಹಿತ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿ ನನಗೆ ಯಾವುದೇ ಹಲ್ಲೇ ಮಾಡಿಲ್ಲ ನನಗೆ ಯಾವುದೇ ಪೆಟ್ಟು ಆಗಿರುವುದಿಲ್ಲ. ಈಗ ಸುಮಾರು ವರ್ಷಗಳ ಹಿಂದೆ ಪೋಲಿಪಿಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಗೆ ಸ್ಥ.ಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಸಾಕ್ಷಿಂನು ಸಹಿಯನ್ನು 2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸುಮಾರು ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದು ಅದರಲ್ಲಿ ಬರೆದಿರು ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತು ಪಡಿಸಿಕೊಂಡಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಚಾಕುವನ್ನು ನೋಡಿ ಗುರುತಿಸಿರುವುದಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ದೂರು ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಕೋರಿದ್ದು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವ ಕಾರಣ ಮಾನ್ಯ ಎಪಿಪಿರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸಹಾಯ ಸರ್ಕಾರಿ ಅಭಿಯೋಜರಿಂದಃ**

. ದಿಃ 18-08-2021 ರಂದು ಆರೋಪಿಯು ತೆಂಗಿನ ಕಾಯಿ ಕೊಂಡೊಯ್ಯಲು ಟೆಂಪೋ ಬೇಕು ಎಂದು ನನ್ನನ್ನು ಪೋನ್ ಮಾಡಿ ಕರೆದಿದ್ದು, ನಾನು ರಾತ್ರಿ 09.35 ಸಮಯದಲ್ಲಿ ಜಾಲಾ ಹೋಬಳಿ ಗಂಟಗಾನಾ ಹಳ್ಳಿಯಿಂದ ನೆಟ್ಟೆ ಮಿನಾಕ್ಷಿ ಕಡೆಗೆ ಹೋಗುವ ರಸ್ತೆಯ ರೈಲ್ವೆ ಗೇಟ್ ಬಳಿ ನಾನು ಕಾಯುತ್ತಿದ್ದಾಗ, ಆರೋಪಿಯು ಅಲ್ಲಿಗೆ ಬಂದು ನನ್ನ ವಾಹನದಲ್ಲಿ ಕುಳಿತುಕೊಂಡು ಕೂಲಿಯವರು ಬರಬೇಕು ಎಂಬುಎವುದಾಗಿ ಕಾಯಿಸಿದ್ದು, ನಂತರ ರಾತ್ರಿ ಸುಮಾರು 10.30 ಸಮಂದುದಲ್ಲಿ ನಾನು ವಾಪಾಸ್ಸು ಹೋಗುತ್ತೇನೆ ಎಂದಾಗ ಆರೋಪಿಯು ತನ್ನ ಬಳಿ ಇದ್ದ ಚಾಕುವಿನಿಂದ ನನ್ನ ಕುತ್ತಿಗೇ ಹಿಂಭಾಗ ಹಾಗೂ ಬಲಗೈ ಬೆರಳಿಗೆ ಕೊಯ್ದು ತೀವ್ರ ಸ್ವರೂಪದ ಗಾಯ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಾನು ಈ ಬಗ್ಗೆ ನಿಪಿ-1 ರಂತೆ ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 19-08-2021 ರಂದು ಪೋಲಿಸರು ಘಟನಾ ಸ್ದಳಕ್ಕೆ ಬಂದಿದ್ದು ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ 4 ಮತ್ತು ಚಾಸಾ 5 ರವರ ಸಮಕ್ಷಮ ಮಧ್ಯಾಹ್ನ 02.00 ರಿಂದ 03.00 ಗಂಟೆ ವರೆಗೆ ನಿಪಿ-2 ರಂತೆ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಹಜರು ಕಾಲಕ್ಕೆ ನ್ಯಾಯಾಲಯದ ಮುಂದಿರುವ ಚಾಕುವನ್ನು ನಾನು ಹಾಜರುಪಡಿಸಿದು ಪೋಲಿಸರು ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರು ಆರೋಪಿಯೊಂದಿಗೇ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ